# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 183 |
| ಸದಸ್ಯರ ಹೆಸರು | ಶ್ರೀ ಎಸ್. ರುದ್ರೇಗೌಡ (ವಿಧಾನಸಭೆಯಿಂದ ಚುನಾಯಿತರಾದವರು) |
| ವಿಷಯ | ಸಾಮಾಜಿಕ ಭದ್ರತಾ ಯೋಜನೆ. |
| ಉತ್ತರಿಸಬೇಕಾದ ದಿನಾಂಕ | 17.07.2019 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |
| **ಪ್ರಶ್ನೆ** | **ಉತ್ತರ** |
| ಅ) ಮೇ 2018 ರಿಂದ ಜೂನ್ 2019 ಅಂತ್ಯಕ್ಕೆ ರಾಜ್ಯದಲ್ಲಿ ಸಂಧ್ಯಾ ಸುರಕ್ಷಾ ಮತ್ತು ವಿಧವಾ ವೇತನ ಯೋಜನೆಗಳಲ್ಲಿ ಎಷ್ಟು ಜನ ಫಲಾನುಭವಿಗಳಿಗೆ ಮಾಸಿಕ ವೇತನವನ್ನು ನೀಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ಸಂಧ್ಯಾ ಸುರಕ್ಷಾ ಮತ್ತು ವಿಧವಾ ವೇತನ ಯೋಜನೆಗಳಡಿ ಮೇ-2018 ರಿಂದ ಜೂನ್-2019ರವರೆಗೆ ಹೊಸದಾಗಿ 390106 ಫಲಾನುಭವಿಗಳಿಗೆ ಮಾಸಿಕ ವೇತನ ನೀಡಲಾಗಿದೆ, ವಿವರ ಕೆಳಗಿನಂತಿದೆ.<br>**ಯೋಜನೆ** — **ಫಲಾನುಭವಿಗಳ ಸಂಖ್ಯೆ**<br>ಸಂಧ್ಯಾ ಸುರಕ್ಷಾ ಯೋಜನೆ — 256447<br>ವಿಧವಾ ವೇತನ ಯೋಜನೆ — 133659<br>**ಒಟ್ಟು** — **390106**<br>ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) ಕಳೆದ ಹತ್ತು ತಿಂಗಳಿಂದ ಮಾಸಿಕ ವೇತನವನ್ನು ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; | ಸಾಮಾಜಿಕ ಭದ್ರತಾ ಯೋಜನೆಯಡಿ ಮಂಜೂರಾತಿ ನೀಡಲಾದ ಫಲಾನುಭವಿಗಳಿಗೆ ನೇರ ಹಣ ಸಂದಾಯ ಯೋಜನೆ ಜಾರಿಗೊಳಿಸುವ ನಿಟ್ಟಿನಲ್ಲಿ ಬ್ಯಾಂಕ್ ಖಾತೆ ವಿವರವನ್ನು ದಿನಾಂಕ:01/07/2018 ರಿಂದ ಕಡ್ಡಾಯಗೊಳಿಸಲಾಗಿದೆ. ವಿದ್ಯುನ್ಮಾನ ತಂತ್ರಾಂಶದ ಮೂಲಕ ಪಾರದರ್ಶಕವಾಗಿ ಪಿಂಚಣಿ ಪಾವತಿಸುವ ಸಲುವಾಗಿ ಖಜಾನೆ-2 ತಂತ್ರಾಂಶವನ್ನು ಜಾರಿಗೊಳಿಸಲಾಗಿದ್ದು, ಅರ್ಜಿ ಸ್ವೀಕರಿಸುವ ಸಂದರ್ಭದಲ್ಲಿ ಫಲಾನುಭವಿಯ ಬ್ಯಾಂಕ್ ಖಾತೆ ಸಂಖ್ಯೆ, IFSC ಹಾಗೂ ಪಿನ್ ಕೋಡ್ ವಿವರ ತಪ್ಪಾಗಿ ನಮೂದಾಗಿರುವ ಕೆಲವು ಪ್ರಕರಣಗಳಲ್ಲಿ ಪಿಂಚಣಿ ಪಾವತಿಯಾಗಿರುವುದಿಲ್ಲ. ಈ ನ್ಯೂನ್ಯತೆಯನ್ನು ಸರಿಪಡಿಸಲು ತಂತ್ರಾಂಶದಲ್ಲಿ ಅವಕಾಶವನ್ನು ಕಲ್ಪಿಸಿದ್ದು, ಸರಿಪಡಿಸಲಾದ ಮಾಹಿತಿಯನ್ನು ಖಜಾನೆಗೆ ವರ್ಗಾಯಿಸಿ ಪಿಂಚಣಿ ಪಾವತಿಗೆ ಕ್ರಮವಹಿಸಲಾಗುತ್ತಿದೆ. |
| ಇ) ಈ ಯೋಜನೆಗಳಲ್ಲಿ ನೀಡುತ್ತಿರುವ ಮಾಸಿಕ ವೇತನವನ್ನು ಹೆಚ್ಚಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ? | ಈ ಯೋಜನೆಗಳಡಿ ನೀಡುತ್ತಿರುವ ಮಾಸಿಕ ವೇತನ ಪಿಂಚಣಿ ಮೊತ್ತವನ್ನು ಹೆಚ್ಚಿಸುವ ಕುರಿತು ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |

ಸಂಖ್ಯೆ: ಆರ್‌ಡಿ 265 ಡಿಎಸ್‌ಪಿ 2019

(ಆರ್.ವಿ ದೇಶಪಾಂಡೆ)
ಕಂದಾಯ ಸಚಿವರು

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್.ರುದ್ರೇಗೌಡ (ವಿಧಾನಸಭೆಯಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: ೧೮೩ಕ್ಕೆ ಅನುಬಂಧ

| Sl.no | District | Widow Pension | Sandya Suraksha Yojane | Total Sanctioned |
|---|---|---|---|---|
| 1 | Bagalkot | 5248 | 10310 | 15558 |
| 2 | Ballari | 6270 | 6439 | 12709 |
| 3 | Bangalore Rural | 1920 | 2340 | 4260 |
| 4 | Belagavi | 11403 | 42964 | 54367 |
| 5 | Bengaluru | 9430 | 8301 | 17731 |
| 6 | Bidar | 4269 | 8637 | 12906 |
| 7 | Chamarajanagar | 2230 | 609 | 2839 |
| 8 | Chikballapur | 3455 | 9102 | 12557 |
| 9 | Chikkamagaluru | 2728 | 6101 | 8829 |
| 10 | Chitradurga | 4362 | 11764 | 16126 |
| 11 | Dakshina Kannada | 4282 | 8592 | 12874 |
| 12 | Davanagere | 6570 | 12000 | 18570 |
| 13 | Dharwad | 3019 | 4123 | 7142 |
| 14 | Gadag | 1650 | 1234 | 2884 |
| 15 | Hassan | 4103 | 4935 | 9038 |
| 16 | Haveri | 3961 | 10499 | 14460 |
| 17 | Kalaburagi | 5371 | 9812 | 15183 |
| 18 | Kodagu | 1365 | 2087 | 3452 |
| 19 | Kolar | 3028 | 6568 | 9596 |
| 20 | Koppal | 2610 | 3204 | 5814 |
| 21 | Mandya | 5248 | 4747 | 9995 |
| 22 | Mysuru | 7661 | 14649 | 22310 |
| 23 | Raichur | 7424 | 11240 | 18664 |
| 24 | Ramanagara | 2691 | 3198 | 5889 |
| 25 | Shivamogga | 4706 | 8722 | 13428 |
| 26 | Tumakuru | 6558 | 16618 | 23176 |
| 27 | Udupi | 2341 | 7210 | 9551 |
| 28 | Uttara Kannada | 2329 | 4538 | 6867 |
| 29 | Vijayapura | 4009 | 9485 | 13494 |
| 30 | Yadgir | 3418 | 6419 | 9837 |
| **Total** | | **133659** | **256447** | **390106** |